OCTOBER 21, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಆಕಾಶವಾಣಿಯ, ನಮ್ಮ ಆತ್ಮೀಯ ಕೇಳುಗರಿಗೆಲ್ಲ, ದಸರಾ ಹಾಗೂ ವಿಜಯದಶಮಿ ಹಬ್ಬದ ಹಾರ್ದಿಕ ಶುಭಾಶಯಗಳು.**

<><><>

**ಮುಖ್ಯಾಂಶಗಳು:**

<><><>

- **ವಿಶ್ವ ವಿಖ್ಯಾತ, ಮೈಸೂರು** ದಸರಾ ಜಂಬೂಸವಾರಿ; ಇಂದು ಸಂಜೆ 4 ಗಂಟೆ 10 ನಿಮಿಷಕ್ಕೆ, ಮುಖ್ಯಮಂತ್ರಿ ಚಾಲನೆ.
- **'ಮಹಾಂತ ಜೋಳಿಗೆ', ವ್ಯಸನಮುಕ್ತಿ ಅಭಿಯಾನ;** ಬಾಗಲಕೋಟೆ ಜಿಲ್ಲೆ, ಸ್ತಬ್ಧಚಿತ್ರ, ಮೈಸೂರು ಜಂಬೂಸವಾರಿಯಲ್ಲಿ, ಭಾಗಿ.
- **'ರೈಲು ಜನ ಸಂವಾದ',** ನೈಋತ್ಯ ರೇಲ್ವೆಯಿಂದ, ವಿಶೇ ' ಅಭಿಯಾನ.
- **ಇಂದು, ಪೊಲೀಸ್ ಹುತಾತ್ಮರ,** ಸಂಸ್ಮರಣ ದಿನ.

<><><>

**ಈಗ ವಾರ್ತೆಗಳ ವಿವರ**

<><><>

**ವಿಶ್ವ ವಿಖ್ಯಾತ, ಮೈಸೂರು** ದಸರಾ ಜಂಬೂಸವಾರಿ, ವಿಜಯದಶಮಿಯಾದ ಇಂದು, ವಿಜೃಂಭಣೆಯಿಂದ ನಡೆಯಲಿದೆ. ಮೈಸೂರು ನಗರ ಪೊಲೀಸ್ ಆಯುಕ್ತರಾದ, ಸೀಮಾ ಲಾಟ್ಕರ್ ನೇತೃತ್ವದಲ್ಲಿ, ವ್ಯಾಪಕ ಬಿಗಿ ಭದ್ರತೆ ಕೈಗೊಳ್ಳಲಾಗಿದೆ. 23 ಪೊಲೀಸ್ ವರಿಷ್ಠಾಧಿಕಾರಿಗಳು ಸೇರಿದಂತೆ, 6 ಸಾವಿರ ಪೊಲೀಸ್ ಸಿಬ್ಬಂದಿ, ರಾಜ್ಯ ಮೀಸಲು ಪೊಲೀಸ್ ಪಡೆ ಹಾಗೂ ಗೃಹರಕ್ಷಕ ದಳದ ಒಂದು ಸಾವಿರ ಸಿಬ್ಬಂದಿ, ಭದ್ರತೆಯ ಹೊಣೆ ಹೊತ್ತಿದ್ದಾರೆ.

<><><>

**ಇಂದು ಮಧ್ಯಾಹ್ನ, 1 ಗಂಟೆ 36 ನಿಮಿ ´ದಿಂದ,** 1 ಗಂಟೆ 56 ನಿಮಿ ´ದ ವರೆಗಿನ, ಶುಭ ಮಹೂರ್ತದಲ್ಲಿ, ಅರಮನೆಯ ಬಲರಾಮ ದ್ವಾರದಲ್ಲಿ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಸಾಂಪ್ರದಾಯಿಕ ನಂದಿ ಧ್ವಜ ಪೂಜೆ ನೆರವೇರಿಸಲಿದ್ದಾರೆ. ಸಂಜೆ 4 ಗಂಟೆ 10 ನಿಮಿ ´ದಿಂದ, 4 ಗಂಟೆ 35 ನಿಮಿ ´ದೊಳಗೆ, ಅಂಬಾವಿಲಾಸ ಅರಮನೆ ಆವರಣದಲ್ಲಿ, ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾದ, ತಾಯಿ ಚಾಮುಂಡೇಶ್ವರಿಗೆ, ಪು ್ಪಾರ್ಚನೆ ಮೂಲಕ, ಜಂಬೂ ಸವಾರಿಗೆ ಗಣ್ಯರು ಚಾಲನೆ ನೀಡುವರು.

<><><>

**750 ಕಿಲೋ ತೂಕದ,** ಚಿನ್ನದ ಅಂಬಾರಿ ಹೊತ್ತು ಸಾಗಲಿರುವ, ಆನೆ ಪ್ರಶಾಂತ ಸೇರಿದಂತೆ, ನಿಶಾನೆ ಆನೆ ಅಭಿಮನ್ಯು ಹಾಗೂ ನೌಪದ್ ಆನೆಗಳು, ಜಂಬೂಸವಾರಿಯ ಮೆರಗು ಹೆಚ್ಚಿಸಲಿವೆ.

<><><>

**ಮೈಸೂರಿನ, ಐತಿಹಾಸಿಕ ಜಂಬೂಸವಾರಿ** ಮೆರವಣಿಗೆಯಲ್ಲಿ, ಬಾಗಲಕೋಟೆ ಜಿಲ್ಲೆಯ, ‘ಮಹಾಂತ ಜೋಳಿಗೆ’ ವ್ಯಸನಮುಕ್ತಿ ಅಭಿಯಾನದ ಸ್ತಬ್ಧಚಿತ್ರ ಗಮನ ಸೆಳೆಯಲಿದೆ. ಇಳಕಲ್ಲ, ಚಿತ್ತರಗಿ ಶ್ರೀ ವಿಜಯ ಮಹಾಂತೇಶ ಸಂಸ್ಥಾನ ಮಠದ, ಲಿಂಗೈಕ್ಯ ಡಾಕ್ಟರ್ ಶ್ರೀ ಮಹಾಂತ ಶಿವಯೋಗಿಗಳು, ವ್ಯಸನಮುಕ್ತ ಸಮಾಜ ನಿರ್ಮಾಣದ ಉದ್ದೇಶದಿಂದ, ದುಶ್ಚಟಗಳನ್ನೇ ಭಿಕ್ಷೆಯಾಗಿ ಸ್ವೀಕರಿಸಿದವರು. ‘ಮಹಾಂತ ಜೋಳಿಗೆ’ ಅಭಿಯಾನ, ಉತ್ತರ ಕರ್ನಾಟಕದಲ್ಲಿ, ಸಾಮಾಜಿಕ ಪರಿವರ್ತನೆಗೆ, ಪ್ರೇರಣೆ ನೀಡಿದ ವಿಶಿ ್ಟ ಚಳವಳಿ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬಾಗಲಕೋಟೆ ಜಿಲ್ಲಾ ಪಂಚಾಯಿತಿ, ಗ್ರಾಮೀಣ ಕೈಗಾರಿಕೆ ಉಪ ನಿರ್ದೇಶಕ, ಸಿದ್ದಾರ್ಯ ಬಳೂರಗಿ.

<><><>

**ಸಿದ್ದಾರ್ಯ ಬಳೂರಗಿ ಧ್ವನಿ 45 ಸೆಕೆಂದುಗಳು**

<><><>

**ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ,** ಜನ ದಸರಾ ಸಂಭ್ರಮದಲ್ಲಿ ಪಾಲ್ಗೊಂಡಿದ್ದು, ಪೌರಕಾರ್ಮಿಕರು ಮಾತ್ರ, ಸ್ವಚ್ಛ ಮೈಸೂರಿಗಾಗಿ, ನಿರಂತರ ಶ್ರಮವಹಿಸಿ, ಮಾದರಿಯಾಗಿದ್ದಾರೆ. ದಸರಾ ವೈಭವದ ಹಿಂದೆ, ನಗರದ ಸ್ವಚ್ಛತೆ ಕಾಪಾಡಲು, ಹಗಲಿರುಳು ಶ್ರಮಿಸುವ, ಪೌರಕಾರ್ಮಿಕರ ಬೆವರಿನ ಪರಿಶ್ರಮ, ಅಡಗಿದೆ. ಬೆಳಗ್ಗೆಯಿಂದ, ಮಧ್ಯ ರಾತ್ರಿಯ ವರೆಗೆ, ರಸ್ತೆಗಳ ಕಸ ಗುಡಿಸಿ, ತ್ಯಾಜ್ಯ ಸಂಗ್ರಹಿಸಿ, ವಿಂಗಡಿಸಿ, ವಿಲೇವಾರಿ ಮಾಡುತ್ತ, ನಗರದ ಪ್ರಮುಖ ಸ್ಥಳಗಳನ್ನು ಸ್ವಚ್ಛವಾಗಿಡಲು, ಶಕ್ತಿಮೀರಿ ಶ್ರಮಿಸುತ್ತಿದ್ದಾರೆ.

<><><>

**ಪೌರಕಾರ್ಮಿಕ ಸಿ. ಮುರುಗೇಶ,** ನಮ್ಮ ಶ್ರಮ ಅರಿತು, ಸಾರ್ವಜನಿಕರು ಸಹ ಸ್ಪಂದಿಸಿದರೆ, ಸ್ವಚ್ಛತೆ ಕಾಪಾಡುವುದು ನಮಗೆ ಸವಾಲೇ ಅಲ್ಲ, ಎಂದು ಸಾಮೂಹಿಕ ಹೊಣೆಗಾರಿಕೆ ನೆನಪಿಸಿದರು.

<><><>

**ಕಳೆದ 20 ವರ್ಷಗಳಿಂದ,** ಪೌರ ಕಾರ್ಮಿಕರಾಗಿರುವ ನಾಗಮ್ಮ, ಕಳೆದ 10 ದಿನಗಳಿಂದ ಹೆಚ್ಚು ಕಸ ಬೀಳುತ್ತಿದ್ದು, ತಮ್ಮ ಕೆಲಸ ಹೆಚ್ಚಾಗಿದೆ, ಎಂದು ಹೇಳಿದರು.

<><><>

**ಪರಿಸರ ಸ್ನೇಹಿ ಹಬ್ಬದಾಚರಣೆಗೆ** ಒತ್ತು ನೀಡಲು, ವಿಶ್ವ ವನ್ಯಜೀವಿ ನಿಧಿ - ಭಾರತ ಘಟಕ, ಕರ್ನಾಟಕ ಸೇರಿದಂತೆ ದೇಶವ್ಯಾಪಿ, ಹಸಿರು ದೀಪಾವಳಿ ಅಭಿಯಾನ ಆರಂಭಿಸಿದೆ. ಬರುವ ನವೆಂಬರ್ 8ನೇ ತಾರೀಖಿನ ವರೆಗೆ, ಜನ ಜಾಗೃತಿ ಅಭಿಯಾನ ನಡೆಯಲಿದೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ವಿಶ್ವ ವನ್ಯಜೀವಿ ನಿಧಿ - ಭಾರತ ಘಟಕದ ಸಹಯೋಗದಲ್ಲಿ, ಶಾಲೆ, ಮಹಾವಿದ್ಯಾಲಯ, ಶಿಕ್ಷಣ ಸಂಸ್ಥೆಗಳು, ವಸತಿ ಕ್ಷೇಮಾಭಿವೃದ್ಧಿ ಸಂಘಗಳು ಮತ್ತು ಸ್ಥಳೀಯ ಸಮುದಾಯಗಳಲ್ಲಿ, ರಾಷ್ಟ್ರೀಯ ಶುದ್ಧ ಗಾಳಿ ಯೋಜನೆ ಕುರಿತು, 130 ನಗರಗಳಿಗೆ ವಿಶೇ ´ ಆದ್ಯತೆ ನೀಡಿ, ಜನ ಜಾಗೃತಿ ಕಾರ್ಯಕ್ರಮ ಆಯೋಜಿಸಿದೆ. ಏಕ ಬಳಕೆ ಪ್ಲಾಸ್ಟಿಕ್, ಪ್ರಖರ ವಿದ್ಯುತ್ ದೀಪ ಬಳಕೆ ಕೈ ಬಿಟ್ಟು, ಹಸಿರು ಪಟಾಕಿ, ಸಾಂಪ್ರದಾಯಿಕ ಮಣ್ಣಿನ ಹಣತೆ, ಹಸಿರು ಇಂಧನ, ಮರುಬಳಕೆ ಫೈಬರ್ ಬಳಸಿ, ಇಂಗಾಲದ ಹೊರಸೂಸುವಿಕೆ ಪ್ರಮಾಣದ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವಂತೆ, ವಿಶ್ವ ವನ್ಯಜೀವಿ ನಿಧಿ - ಭಾರತ ಘಟಕ ಮನವಿ ಮಾಡಿದೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಕಲ್ಯಾಣ ಕರ್ನಾಟಕದ ಬೀದರನಲ್ಲಿ,** ದಸರಾ ಹಾಗೂ ವಿಜಯದಶಮಿ ಹಬ್ಬದ ಅಂಗವಾಗಿ, ಶ್ರೀ ರಾಮಲೀಲಾ ಉತ್ಸವ ಸಮಿತಿ, ಇಂದು ಸಂಭ್ರಮದ ರಾಮಲೀಲೆ ಪ್ರದರ್ಶನ ಹಾಗೂ 46 ಅಡಿ ಎತ್ತರದ ಶಿವ ಭಕ್ತ ರಾವಣನ ಪ್ರತಿಕೃತಿ ದಹಿಸಿ, ಬಾನಂಗಳದಲ್ಲಿ ಸಿಡಿಮದ್ದು ಸಿಡಿಸಿ, ದುಷ್ಟ ಶಕ್ತಿಯ ಸಂಹಾರ, ಶಿಷ್ಟ ಶಕ್ತಿಯ ವಿಜಯದ ದ್ಯೋತಕವಾಗಿ, ಸರ್ವರೂ ಪಾಲ್ಗೊಂಡು ಆಚರಿಸುವುದು ವಿಶೇಷ. ಬೀದರ ನಗರದ, ಶ್ರೀ ಸಾಯಿ ಶಾಲೆಯ ಮೈದಾನದಲ್ಲಿ ಇಂದು ಸಂಜೆ 6.30ಕ್ಕೆ ಜರುಗಲಿರುವ, ಶ್ರೀ ರಾಮಲೀಲಾ ಉತ್ಸವದ, ಪೂರ್ವ ಸಿದ್ಧತೆ ಪರಿಶೀಲಿಸಿ, ಪ್ರದೇಶ ಸಮಾಚಾರಕ್ಕಾಗಿ, ಆಚರಣೆಯ ಉದ್ದೇಶದ ಕುರಿತು, ವಿವರಿಸಿದ್ದಾರೆ, ಸಮಿತಿ ಅಧ್ಯಕ್ಷ, ಈಶ್ವರಸಿಂಗ ಠಾಕೂರ.

<><><>

**ಈಶ್ವರಸಿಂಗ ಠಾಕೂರ ಧ್ವನಿ (58) ಸೆಕೆಂದುಗಳು**

<><><>

**ಇಂದು, ಪೊಲೀಸ್ ಹುತಾತ್ಮರ ಸಂಸ್ಮರಣ ದಿನ.** ಪ್ರಧಾನ ಕಾರ್ಯಕ್ರಮ, ಬೆಂಗಳೂರಿನ ನಗರ ಸಶಸ್ತ್ರ ಮೀಸಲು ಪೊಲೀಸ್ ಪಡೆ ಕೇಂದ್ರ ಸ್ಥಾನದ, ಹುತಾತ್ಮರ ಉದ್ಯಾನದಲ್ಲಿ, ಇಂದು ಬೆಳಗ್ಗೆ 8 ಗಂಟೆಗೆ, ನಡೆಯಲಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಹುತಾತ್ಮ ಪೊಲೀಸ್ ಸಿಬ್ಬಂದಿಗೆ, ಶ್ರದ್ಧಾಂಜಲಿ ಸಲ್ಲಿಸಿ, ನಾಡಿಗೆ ಅವರ ತ್ಯಾಗ ಮತ್ತು ಸೇವೆಯನ್ನು ಸ್ಮರಿಸಲಿದ್ದಾರೆ.

<><><>

**ರಾಜ್ಯದ ಒಟ್ಟು ಆರು ಜನ ಪ್ರಸಕ್ತ ಸಾಲಿನಲ್ಲಿ,** ಹುತಾತ್ಮರಾಗಿದ್ದು, ಹಾವೇರಿ ಜಿಲ್ಲೆಯ ಪೊಲೀಸ್ ಇನ್ಸ್‌ಪೆಕ್ಟರ್ ಪಂಚಯ್ಯ ಸಾಲಿಮಠ, ತುಮಕೂರು ಜಿಲ್ಲೆಯ, ಸಹಾಯಕ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಎಂ.ಎಲ್. ಬಸವರಾಜ, ಬೆಂಗಳೂರು ನಗರದ ಪೊಲೀಸ್ ಇನ್ಸ್‌ಪೆಕ್ಟರ್ ಕೆ.ಬಿ.ರವಿ, ರಾಯಚೂರು ಜಿಲ್ಲೆಯ, ಮುಖ್ಯ ಪೇದೆ ಇಸ್ಮಾಯಿಲ್, ಬಾಗಲಕೋಟೆ ಜಿಲ್ಲೆಯ ಮುಖ್ಯ ಪೇದೆ, ಎ.ಎಮ್. ಸಾಲಮಂಟಪಿ ಹಾಗೂ ಹಾಸನ ಜಿಲ್ಲೆಯ ಮುಖ್ಯ ಪೇದೆ, ಬೀರಲಿಂಗ ಅವರಿಗೆ ಗೌರವ ಅರ್ಪಿಸಲಾಗುತ್ತಿದೆ.

<><><>

**ಗೃಹ ಖಾತೆ ಸಚಿವ, ಪ್ರಿಯಾಂಕ ಖರ್ಗೆ** ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ಪೊಲೀಸ್ ಅಧಿಕಾರಿಗಳು, ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಲಿದ್ದಾರೆ.

<><><>

**ಧಾರವಾಡ ಸೇರಿದಂತೆ,** ರಾಜ್ಯದ 31 ಜಿಲ್ಲೆಗಳಲ್ಲಿ, ಪೊಲೀಸ್ ಹುತಾತ್ಮರ ಸಂಸ್ಮರಣ ದಿನದ ಅಂಗವಾಗಿ, ಶ್ರದ್ಧಾಂಜಲಿ ಸಲ್ಲಿಸಲಾಗುತ್ತಿದೆ.

<><><>

**ನೈಋತ್ಯ ರೇಲ್ವೆ, ಬೆಂಗಳೂರು ವಿಭಾಗ,** 6ನೇ ಆವೃತ್ತಿಯ, 'ರೈಲು ಜನ ಸಂವಾದ', ವಿಶೇ ' ಅಭಿಯಾನದ ಅಂಗವಾಗಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ, ಪ್ರಯಾಣಿಕರೊಂದಿಗೆ, ಸಂವಾದ ಕಾರ್ಯಕ್ರಮ ಆಯೋಜಿಸಿತ್ತು. ಬೆಂಗಳೂರು ವಿಭಾಗೀಯ ರೇಲ್ವೆ ವ್ಯವಸ್ಥಾಪಕ, ಆಶುತೋಷಕುಮಾರ ಸಿಂಗ್, ಪ್ರಯಾಣಿಕರೊಂದಿಗೆ ಮಾತುಕತೆ ನಡೆಸಿದರು. ಪ್ರಯಾಣಿಕರಿಗೆ ವಿಶೇಷ ಸೌಲಭ್ಯಗಳು, ಸೇವಾ ಸುಧಾರಣೆ, ಸ್ವಚ್ಛತೆ ಸೇರಿದಂತೆ ಇತರೆ ವಿ 'ಯಗಳ ಕುರಿತು, ಪ್ರಯಾಣಿಕರ ಅನಿಸಿಕೆ ಮತ್ತು ಸಲಹೆಗಳನ್ನು ಸ್ವೀಕರಿಸಿದರು. ರೇಲ್ವೆ ಕೈಗೊಂಡ, ಸ್ವಚ್ಛತಾ ಪಾಕ್ಷಿಕ ಉಪಕ್ರಮಗಳ ಬಗ್ಗೆ, ವಿಭಾಗೀಯ ಅಪರ ರೇಲ್ವೆ ವ್ಯವಸ್ಥಾಪಕ ಪರೀಕ್ಷಿತ್ ಮೋಹನ್‌ಪುರಿಯಾ ಮತ್ತು ಪ್ರವೀಣ ಕಾತರಕಿ, ಮಾಹಿತಿ ನೀಡಿ, ರೈಲು ಜನ ಸಂವಾದ, ನಾಳೆ ಮುಕ್ತಾಯವಾಗಲಿದೆ, ಎಂದರು.

<><><>

**ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ,** ಬೆಳಗಾವಿಯಲ್ಲಿ, 26ನೇ ತಾರೀಖು, ಕಬ್ಬು ಬೆಳೆಗಾರರ ಸಮಸ್ಯೆ ಕುರಿತು, ವಿಶೇಷ ಸಭೆ ನಡೆಸಲಿದ್ದಾರೆ.

<><><>

## ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- **ವಿಶ್ವ ವಿಖ್ಯಾತ, ಮೈಸೂರು** ದಸರಾ ಜಂಬೂಸವಾರಿ; ಇಂದು ಸಂಜೆ 4 ಗಂಟೆ 10 ನಿಮಿಷಕ್ಕೆ, ಮುಖ್ಯಮಂತ್ರಿ ಚಾಲನೆ.
- **‘ಮಹಾಂತ ಜೋಳಿಗೆ’, ವ್ಯಸನಮುಕ್ತಿ ಅಭಿಯಾನ;** ಬಾಗಲಕೋಟೆ ಜಿಲ್ಲೆ, ಸ್ತಬ್ಧಚಿತ್ರ, ಮೈಸೂರು ಜಂಬೂಸವಾರಿಯಲ್ಲಿ, ಭಾಗಿ.
- **‘ರೈಲು ಜನ ಸಂವಾದ’,** ನೈಋತ್ಯ ರೇಲ್ವೆಯಿಂದ, ವಿಶೇ ’ ಅಭಿಯಾನ.
- **ಇಂದು, ಪೊಲೀಸ್ ಹುತಾತ್ಮರ,** ಸಂಸ್ಮರಣ ದಿನ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>